ಪರಿಶೀಲಿಸಲು ಸರ್ಕಾರ ತೀರ್ಮಾನ ಕೈಗೊಂಡಿದೆ. ಆದ್ದರಿಂದ ಹುದ್ದೆಗಳ ಸೃಜನೆಯ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಯಾವುದೇ ಹುದ್ದೆಗಳ ಸೃಜನೆಯ ಪ್ರಸ್ತಾವನೆಗಳನ್ನು ಅಧಿಕಾರ ವೇತನ ಸಮಿತಿಯ ವರದಿಯು ಬರುವ ತನಕ ತಡೆಹಿಡಿಯಲು ಸರ್ಕಾರವು ನಿಲುವು ತೆಗೆದುಕೊಂಡಿರುತ್ತದೆ. ಆದ್ದರಿಂದ 2012–13ನೇ ಹಣಕಾಸು ವರ್ಷದ ಮೊದಲನೇ ತ್ರೈಮಾಸಿಕ ಅವಧಿಯಲ್ಲಿ ಸಿಂಧನೂರಿನಲ್ಲಿ ಸಂಚಾರಿ ಪೊಲೀಸ್ ಠಾಣೆಯನ್ನು ತೆರೆಯುವ ಪ್ರಸ್ತಾವನೆಯನ್ನು ಆದ್ಯತೆಯ ಮೇಲೆ ಪರಿಶೀಲಿಸಲಾಗುವುದು.

ಇ) ಹೌದು.

ಈ) ಪ್ರಶ್ನೆ (ಆ) ನಲ್ಲಿ ನೀಡಿರುವ ಉತ್ತರದಲ್ಲಿ ತಿಳಿಸಿರುವಂತೆ 2012–

ಉ) 13ನೇ ಹಣಕಾಸು ವರ್ಷದ ಮೊದಲನೇ ತ್ರೈಮಾಸಿಕ ಅವಧಿಯಲ್ಲಿ

ಊ) ಅನುದಾನದ ಲಭ್ಯತೆಯ ಮೇಲೆ ಸಿಂಧನೂರಿನಲ್ಲಿ ಸಂಚಾರಿ ಪೊಲೀಸ್ ಠಾಣೆ ತೆರೆಯುವ ಬಗ್ಗೆ ಪರಿಶೀಲಿಸಲಾಗುವುದು.

ರಾಯಚೂರಿನ ಶಾಖೋತ್ಪನ್ನ ವಿದ್ಯುತ್ ಘಟಕಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 191 (300)

ಸದಸ್ಯರ ಹೆಸರು : ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು)

ಉತ್ತರಿಸುವ ಸಚಿವರು : ಕುಮಾರಿ ಶೋಭಾ ಕರಂದ್ಲಾಜೆ (ಇಂಧನ ಸಚಿವರು)

ಪ್ರಶ್ನೆಗಳು:–

ಅ) ರಾಯಚೂರಿನಲ್ಲಿರುವ ಶಾಖೋತ್ಪನ್ನ ವಿದ್ಯುತ್ ಘಟಕಗಳ ಸಂಖ್ಯೆ ಎಷ್ಟು?

ಆ) ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹಾಗೂ ನಿಷ್ಕ್ರೀಯವಾಗಿರುವ ವಿದ್ಯುತ್ ಘಟಕಗಳ ಸಂಖ್ಯೆ ಎಷ್ಟು?

ಇ) ಕಳೆದ ಮೂರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಘಟಕಗಳಿಂದ ಉತ್ಪತ್ತಿಯಾಗುತ್ತಿರುವ ವಿದ್ಯುತ್ ಪ್ರಮಾಣ ಎಷ್ಟು? ವರ್ಷವಾರು ವಿವರಗಳನ್ನು ನೀಡುವುದು;

ಈ) ಕಳೆದ ಮೂರು ವರ್ಷಗಳಿಂದ ಕಾರ್ಯಾರಂಭ ಮಾಡದೇ ಸ್ಥಗಿತಗೊಂಡಿರುವ ವಿದ್ಯುತ್ ಘಟಕಗಳ ಸಂಖ್ಯೆ ಎಷ್ಟು ಮತ್ತು ಹಾಗೆ ಸ್ಥಗಿತಗೊಳ್ಳಲು ಕಾರಣಗಳೇನು?

ಉ) ಕಳೆದ ಮೂರು ವರ್ಷಗಳಿಂದ ವಿದ್ಯುತ್ ಘಟಕಗಳು ಸ್ಥಗಿತಗೊಂಡಿದ್ದರೂ ಸಹ ಇದುವರೆವಿಗೂ ದುರಸ್ಥಿಪಡಿಸದೇ ಇರಲು ಕಾರಣಗಳೇನು?

ಊ) ಈ ವಿದ್ಯುತ್ ಘಟಕಗಳನ್ನು ದುರಸ್ಥಿಪಡಿಸಲು ಸರ್ಕಾರಕ್ಕಿರುವ ತೊಂದರೆಗಳೇನು?

ಉತ್ತರಗಳು:–

ಅ) ಪ್ರಸ್ತುತ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ ಪ್ರತಿ 210 ಮೆ.ವ್ಯಾ. ಸಾಮರ್ಥ್ಯದ 7 ಘಟಕಗಳು ಮತ್ತು 250 ಮೆ.ವ್ಯಾ. ಸಾಮರ್ಥ್ಯದ 1 ಘಟಕವೂ ಕಾರ್ಯ ನಿರ್ವಹಿಸುತ್ತಿವೆ.

ಆ) ಪ್ರಸ್ತುತ (27.01.2012 ರಂತೆ), ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ 5ನೇ ಘಟಕವು ದಿನಾಂಕ 20.01.2012 ರಿಂದ ಬಾಯ್ಲರ್ ಕೊಳವೆಯ ಸೋರಿಕೆಯಿಂದಾಗಿ ಹಾಗೂ 8ನೇ ಘಟಕವು ದಿನಾಂಕ 06.01.2012 ರಿಂದ ಬೇರಿಂಗ್‌ನ ಸಮಸ್ಯೆಯಿಂದಾಗಿ ಸ್ಥಗಿತಗೊಂಡಿದ್ದು, ಈ ಘಟಕಗಳನ್ನು ಸಧ್ಯದಲ್ಲಿಯೇ ಉತ್ಪಾದನೆಗೆ ತೊಡಗಿಸಲಾಗುವುದು. ಈ 2 ಘಟಕಗಳನ್ನು ಹೊರತುಪಡಿಸಿ ಉಳಿದ ಎಲ್ಲಾ 6 ಘಟಕಗಳೂ ಪೂರ್ಣ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದಿಸುತ್ತಿವೆ.

ಇ) ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಿಂದ ಕಳೆದ ಮೂರು ವರ್ಷಗಳಲ್ಲಿ ಉತ್ಪಾದಿಸಲಾದ ವಿದ್ಯುತ್‌ನ ವಿವರ ಈ ಕೆಳಕಂಡಂತಿದೆ;

ವರ್ಷ	ವಿದ್ಯುತ್ ಉತ್ಪಾದನೆ (ದ.ಲ.ಯೂ. ಗಳಲ್ಲಿ)
2009–10	10402.10
2010–11	8803.27
2011–12	7379.97
(31.12.2011 ರವರೆಗೆ)	

ಈ) ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ ಯಾವುದೇ ಘಟಕವು ಕಳೆದ ಮೂರು ವರ್ಷಗಳಿಂದ ಕಾರ್ಯನಿರ್ವಹಿಸದೇ ಇರುವ ದಾಖಲೆ ಇರುವುದಿಲ್ಲ. ಆದಾಗ್ಯೂ, ತಾಂತ್ರಿಕ ತೊಂದರೆಗಳು, ವಾರ್ಷಿಕ ನಿರ್ವಹಣೆ ಹಾಗೂ ಇನ್ನಿತರ ಕಾರಣಗಳಿಂದಾಗಿ ಕೆಲವು ಸಂದರ್ಭಗಳಲ್ಲಿ ಘಟಕಗಳು ನಿಲುಗಡೆಯಾಗುತ್ತಿರುತ್ತದೆ. ಇದು ದೇಶದ ಇತರ ಎಲ್ಲಾ ಘಟಕಗಳಲ್ಲಿಯೂ ಸಹ ಸರ್ವೇ ಸಾಮಾನ್ಯ ವಿಷಯವಾಗಿರುತ್ತದೆ.

ಉ) ಈ ಕೇಂದ್ರದಲ್ಲಿನ ಘಟಕಗಳು ಯಾವುದೇ ಕಾರಣಗಳಿಂದ ಸ್ಥಗಿತಗೊಂಡಲ್ಲಿ, ಅವುಗಳ ದುರಸ್ತಿಗಾಗಿ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದರ ಮೂಲಕ ಅತ್ಯಂತ ಕಡಿಮೆ ಅವಧಿಯಲ್ಲಿ ಘಟಕಗಳನ್ನು ವಿದ್ಯುತ್ ಉತ್ಪಾದನೆಗೆ ತೊಡಗಿಸಲಾಗುತ್ತಿದೆ.

ಊ) ಉದ್ಭವಿಸುವುದಿಲ್ಲ.

ನಿವೇಶನ ರಹಿತರಿಗೆ ನಿವೇಶನ ಮಂಜೂರಾತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 195 (345)

ಸದಸ್ಯರ ಹೆಸರು : ಶ್ರೀ ನರೇಂದ್ರ ಸ್ವಾಮಿ ಪಿ.ಎಂ (ಮಳವಳ್ಳಿ)

ಉತ್ತರಿಸುವ ಸಚಿವರು : ಶ್ರೀ ವಿ. ಸೋಮಣ್ಣ (ವಸತಿ ಸಚಿವರು)